**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 6164/2021 ಪ್ರಾ.ಸಾ – 6**
**ಚಾ.ಸಾ – 7**

**ದಿನಾಂಕ: 10-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಗಂಗಾಧರ |
| ತಂದೆಯ ಹೆಸರು | : | ಮಾರಯ್ಯ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಲಕ್ಕೀಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾ. ಹಾಸನ ಜಿಲ್ಲೆ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ದಿನಾಂಕ 05-08-2021 ರಂದು ನಾನು ತಿಪಟೂರು ಗ್ರಾಮಾಂತರ ಪೋಲಿಸ ಠಾಣೆಗೆ ನಾನು ಚಾಸಾ-1 ರವರೊಂದಿಗೆ ದೂರನ್ನು ನೀಡಲು ಬಂದಿದ್ದಾಗ ಪೋಲಿಸರು ನನ್ನ ಸಹಿಯನ್ನು ಪಡೆದಿರುತಾರೆ. ಟ್ರಾಕ್ಟರ್ ಮತ್ತು ಬೈಕಿಗೆ ದಿನಾಂಕ 30-07-2021 ರಂದು ಆದ ಅಪಘಾತದ ಸಂಬಂಂದ ಸಹಿಯನ್ನು ಪಡೆದಿರುತ್ತಾರೇ. ಇದನ್ನು ಹೊರತು ಪಡಿಸಿ ನನಗೆ ಬೇರೆನೂ ಗೊತ್ತಿಲ್ಲ . ನನ್ನ ಸಮಕ್ಷಮ ಏನನ್ನೂ ಜ ಪ್ತಿ ಪಡಿಸಿಕೊಂಡಿರುವುದಿಲ್ಲ.

ಸಾಕ್ಷಿ ನಿಪಿ.3 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿಯನ್ನು ನಿಪಿ- ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನನ್ನೊಂದಿಗೆ ಚಾಸಾ- 3 ಮತು 10 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ.5 ರಲಿರುವ ಬೈಕ್ ಮತು ಟ್ರಾಕ್ಟರನು ನೋಡಿ ಗುರುತಿಸಿರುತಾರೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**CC. No. 6164 /2021** **PW -6**

**ವಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ದಿಃ 05-08-2021 ರದು ತಿಪಟೂರು ಗ್ರಾಮಾಂತರ ಪೋಲಿಸ್ ಠಾಣಾ ಅವರಣದಲ್ಲ ನನ್ನ ಮತ್ತು ಚಾಸ- 3 ಮತ್ತು 10 ರವರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿ ಕೆಎ-17- ಎಸ್ 5789 ಬೈಕ್ ಮತ್ತು ಕೆಎಲ್ ಟಿ 3500 ಕಂಪನಿಯ ಟ್ರಾಕ್ಟರ್ ಇಂಜಿನ್ ಸಂಖ್ಯೆ ಇ-33-19-819 ನ್ನು ಮತ್ತು ಟ್ರೇಲರ್ ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪಂಚನಾಮೆಯನ್ನು ಮದ್ಯಹ್ನ 3.00 ರಿಂದ 3.30 ರವರೆಗೆ ಬರೆಯಲಾಯಿತು ಎಂದರೆ ಸರಿ .

**ವಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಕೆ ವೈ . ವಕೀಲರಿಂದಃ**

ಚಾಸಾ-1 ನನ್ನ ಸಂಬಂಧಿಕರು. ಘಟನೆಯಾದ 4-5 ದಿನಗಳ ನಂತರ ನಾನು ಪೋಲಿಸ ಠಾಣೆಗೆ ಹೋಗಿದ್ದೆ. ನನಗೆ ಅಪಘಾತದ ಬಗ್ಗೆ ದಿನಾಂಕ 30-07-2021 ರಂದು ತಿಳಿದು ಬಂದಿರುತ್ತದೆ . ಅಪಘತ ವಾದ ದಿನದಂದೇ ಠಣೆಗೆ ದೂರು ನೀಡಲು ತೊಂದರೆ ಇರಲಿಲ್ಲ, ಪೋಲಿಸರು ನನಗೆ ಪಂಚನಾಮೆಗೆ ಬರಲು ನೋಟೀಸು ನೀಡಿರಲಿಲ್ಲ. ಪಂಚನಾಮೆಯಲ್ಲಿ ಏನು ಬರೆಯಲಾಯಿತು ಎಂದು ನನಗೆ ಗೊತ್ತಿಲ್ಲ. ನಿಪಿ.3 ನ್ನು ಯಾರು ಬರೇದಿರುತ್ತಾರೇ ಎಂದು ನನಗೆ ಗೂತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಾಹನಗಳನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಸಂಬಂಧಿಕನಾದ ಕಾರಣ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**